ತಾಂತ್ರಿಕ ವಿದ್ಯಾರ್ಥಿಗಳಿಂದ ಸಿ.ಇ.ಟಿ. ಹೆಚ್ಚುವರಿ ಶುಲ್ಕ ವಸೂಲಿ

458 (821) ಶ್ರೀ ಬಸವರಾಜನ್ (ಚಿತ್ರದುರ್ಗ) : ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006ನೇ ಸಾಲಿನಲ್ಲಿ ಹಾಗೂ ತದನಂತರ ತಾಂತ್ರಿಕ ಶಿಕ್ಷಣ ಪಡೆಯಲು ಸಿ.ಇ.ಟಿ ಮೂಲಕ ಆಯ್ಕೆಯಾಗುವ ವಿದ್ಯಾರ್ಥಿಗಳಿಂದ ನಿಯಮಾನುಸಾರ ನಿಗದಿಪಡಿಸಲಾಗಿದ್ದ ರೂ.60,000/–ಗಳ ಬದಲಾಗಿ ರೂ.85,000/– ಗಳನ್ನು ತಾಂತ್ರಿಕ ವಿದ್ಯಾಸಂಸ್ಥೆಗಳು ಪಾವತಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಹಿಂದಿರುಗಿಸಲು ಸರ್ಕಾರ ಆದೇಶಿಸಿದೆಯೇ;

ಇ) ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ಪಡೆದ ರೂ.25,000/–ಗಳನ್ನು ಹಿಂತಿರುಗಿಸಿರುವ ವಿದ್ಯಾ ಸಂಸ್ಥೆಗಳಾವುವು; ಹಿಂತಿರುಗಿಸದೇ ಇರುವ ವಿದ್ಯಾ ಸಂಸ್ಥೆಗಳಾವುವು (ವಿದ್ಯಾರ್ಥಿವಾರು ಮಾಹಿತಿ ನೀಡುವುದು)?

ಶ್ರೀ ಡಾ. ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು) :

ಅ) ಇಲ್ಲ. 2006–07ನೇ ಸಾಲಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು ಎರಡು ಹಂತದ ಶುಲ್ಕವನ್ನು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾಗಿತ್ತು. ಶೇಕಡ 40 ರಷ್ಟು ಸೀಟುಗಳನ್ನು ರೂ.15,000/– ದಂತೆ ಹಾಗೂ ಶೇಕಡ 20 ರಷ್ಟು ಸೀಟುಗಳನ್ನು ರೂ.85,000/–ಗಳಂತೆ ಸಿ.ಇ.ಟಿ ಮುಖಾಂತರ ತುಂಬಲಾಗಿತ್ತು.

ಆ) : ಉದ್ಭವಿಸುವುದಿಲ್ಲ.

ಇ) : ಉದ್ಭವಿಸುವುದಿಲ್ಲ.